ಅಸಲು ದಾವೆ ನಂಃ 307/2022 ಡಿ. ಡಬ್ಲ್ಯೂಃ 1–ಬಸವರಾಜ ತಂದೆ ನಿಂಗಪ್ಪ ಗೊರವರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 09/02/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಆರ್.ಕೆ.ಬಿ. ರವರಿಂದಃ**

ನನ್ನ ಅಜ್ಜನ ಹೆಸರು ಬಸಪ್ಪ ಗೊರವರ . ನನ್ನ ಅಜ್ಜನವರಿಗೆ ಮೂರು ಜನ ಮಕ್ಕಳು. ಅವರ ಹೆಸರು ಕಲ್ಲಮ್ಮ ಯರಗೇರಿ , ಬಸವಣ್ಣೆವ್ವ ಹಕಾರಿ , ನಿಂಗಪ್ಪ ಬಸಪ್ಪ ಗೊರವರ ಇರುತ್ತದೆ. ನಮ್ಮ ತಂದೆಯವರಿಗೆ ನನ್ನನ್ನು ಸೇರಿ ನಾಲ್ಕು ಜನ ಮಕ್ಕಳು. ನನ್ನ ತಾಯಿ ಹೆಸರು ಬಸವ್ವ ಗೊರವರ . ದಾವಾ ಆಸ್ತಿಗಳು ಮೂಲತಃ ನಮ್ಮ ಅಜ್ಜನಿಂದ ಬಂದಿರುತ್ತವೆ. ದಾವಾ ಆಸ್ತಿಯ ಸರ್ವೆ ನಂ.23/2 ಎ + 2 ಬಿ ಇರುತ್ತದೆ. ಅದರ ವಿಸ್ತೀರ್ಣ 6 ಎಕರೆ 6 ಗುಂಟೆ ಇರುತ್ತದೆ. ಕುರಹಟ್ಟಿ ಗ್ರಾಮದಲ್ಲಿರಮ ಮನೆ ನಂಬರ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಸಹ ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ನನ್ನ ತಂದೆಯವರು ಬದುಕಿದ್ದಾಗ ವಾದಿ ಮತ್ತು ನಾವೆಲ್ಲರೂ ಕೂಡಿ ಸಾಗುವಳಿ ಮಾಡುತ್ತಿದ್ದೇವು ಎಂದರೆ ಸರಿ. ಇಂದಿನವರೆಗೂ ದಾವಾ ಆಸ್ತಿಗಳಲ್ಲಿ ವಾದಿ ಮತ್ತು ನಾವೆಲ್ಲರೂ ಕೂಡಿ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ . ನನ್ನ ತಂದೆಯವರು ಕುರಹಟ್ಟಿ ಗ್ರಾಮದಲ್ಲಿ ನಿಧನರಾಗಿರುತ್ತಾರೆ. ನನ್ನ ತಂದೆಯವರು ನಿಧನರಾದ ನಂತರ ವಾದಿಯವರು ಮತ್ತು 6 ನೇ ಪ್ರತಿವಾದಿ ಮತ್ತು ನಾವೆಲ್ಲರೂ ಸೇರಿ ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ . ನಮ್ಮ ಮನೆತನಗಳಲ್ಲಿ ಇಂದಿನವರೆಗೂ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ .

**ಮರುವಿಚಾರಣೆಃ ಇಲ್ಲಾ**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.